ಇ) ಉಚ್ಚ ನ್ಯಾಯಾಲಯದಿಂದ ಕೆಲವು ಬಾಕಿದಾರರ ತಡೆ ಆಜ್ಞೆ ತಂದಿರುವುದರಿಂದ ಅವರುಗಳಿಂದ ಬಾಕಿ ವಸೂಲು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿಲ್ಲ. ಮತ್ತು ಇತರ ಬಾಕಿದಾರರಿಂದ ವಸೂಲು ಮಾಡಲು ನಿರ್ಬಳರ ಭೂ ಸ್ವಾಧೀನ ಕ್ರಮದ ರೀತಿ ಕ್ರಮ ಕೈಗೊಳ್ಳಲಾಗುತ್ತದೆ.

ವಿದ್ಯುಚ್ಛಕ್ತಿ ಇಲಾಖೆಯ ಮಳಿಗೆ ಬಗ್ಗೆ

೫೪೮. ಶ್ರೀ ಚಂದ್ರಶೇಖರ ಮಾವಿನಿ (ಪರಸಗಡ).—ಮಾನ್ಯ ವಿದ್ಯುಚ್ಛಕ್ತಿ ಮತ್ತು ಗಣಿ ಹಾಗೂ ಭೂ ವಿಜ್ಞಾನ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇಡೀ ರಾಜ್ಯಕ್ಕೆ ಒಂದೇ ಒಂದು ಮಳಿಗೆ ಬೆಂಗಳೂರು ನಗರದಲ್ಲಿ ಇದ್ದು ಎಲ್ಲ ಜಿಲ್ಲೆಯವರು ಅವಶ್ಯಕ ವಿದ್ಯುತ್ ಸಾಮಗ್ರಿಗಳನ್ನು ಇಲ್ಲಿಂದಲೇ ಒಯ್ಯಬೇಕಾಗಿ ದೂರದ ಹೈದರಾಬಾದ್, ಕರ್ನಾಟಕ ಉತ್ತರ ಕರ್ನಾಟಕದವರಿಗೆ ಬಹಳಷ್ಟು ತೊಂದರೆಯಾದ ಸಂಗತಿ ಸರಕಾರದವರ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಅನುಕೂಲವಾಗಲು ಹುಬ್ಬಳ್ಳಿಯಲ್ಲಿ ಒಂದು ವಿದ್ಯುತ್ ಸಾಮಗ್ರಿಗಳ ಮಳಿಗೆಯನ್ನು ತೆರೆಯಲಾಗುವುದೇ ?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಬೆಂಗಳೂರಿನ ಕೇಂದ್ರೀಯ ಮಳಿಗೆಯಿಂದಲೇ ಎಲ್ಲಾ ಸಾಮಗ್ರಿಗಳನ್ನು ಎಲ್ಲಾ ಜಿಲ್ಲೆಗಳಿಗೂ ಸರಬರಾಜು ಮಾಡುವ ಸಂಗತಿ ಇಲ್ಲ. ಬೆಂಗಳೂರಿನ ಕೇಂದ್ರೀಯ ಮಳಿಗೆಯ ಜೊತೆಗೆ ೬ ಪ್ರಾದೇಶಿಕ ಮಳಿಗೆಗಳೂ, ೩೩ ವಿಭಾಗೀಯ ಮಳಿಗೆಗಳಿವೆ. ಸರಕು ತರಿಸಿಕೊಳ್ಳಲು ಕೋರಿಕೆ ಮಾಡಿದಲ್ಲಿ ನೇರವಾಗಿ ಸಾಮಗ್ರಿಗಳನ್ನು ತಯಾರಕರ ಉತ್ಪಾದನಾ ಕೇಂದ್ರಗಳಿಂದಲೇ ಸಾಮಾನುಗಳನ್ನು ಸರಬರಾಜು ಮಾಡುವ ವ್ಯವಸ್ಥೆ ಇದೆ. ವಿಭಾಗೀಯ ಮಳಿಗೆಗಳಿಗೆ ಸಂಬಂಧಿಸಿದ ಅಧಿಕಾರಿಗಳು ಪ್ರಾದೇಶಿಕ ಮಳಿಗೆಯ ಅಧಿಕಾರಿಗಳಿಂದ ಸಾಮಾನುಗಳನ್ನು ಕೋರಿಕೆ ಮೂಲಕ ತರಿಸಿಕೊಳ್ಳಬಹುದು. ಅಪೂರ್ವ ಸಂದರ್ಭಗಳಲ್ಲಿ ಪ್ರಾದೇಶಿಕ ಮಳಿಗೆಗಳಿಂದ ಸಾಮಾನುಗಳು ದೊರೆಯದಿದ್ದಾಗ ಮಾತ್ರ ಕೇಂದ್ರೀಯ ಮಳಿಗೆಯಾದ ಬೆಂಗಳೂರಿನಿಂದ ಪಡೆಯಬೇಕಾಗಿದೆ.

ಆ) ಹುಬ್ಬಳ್ಳಿಯಲ್ಲಿ ಹಾಲಿ ಒಂದು ಪ್ರಾದೇಶಿಕ ಮಳಿಗೆ ಇದ್ದು, ಅದು ಆ ವೃತ್ತದ ಅವಶ್ಯಕತೆಯನ್ನು ಪೂರೈಸುತ್ತಿದೆ. ಹುಬ್ಬಳ್ಳಿಯಲ್ಲಿ ಕೇಂದ್ರೀಯ ಮಳಿಗೆ ತೆರೆಯುವ ವಿಷಯ ಮಂಡಳಿಯು ಪರಿಶೀಲಿಸುತ್ತಿದೆ. ಮತ್ತು ಶೀಘ್ರವಾಗಿ ತೀರ್ಮಾನಿಸುತ್ತದೆ.

ಹುಲ್ಲಿನ ಬ್ಯಾಂಕುಗಳನ್ನು ಸ್ಥಾಪಿಸುವ ಬಗ್ಗೆ

೫೫೦. ಶ್ರೀ ಆರ್. ವೆಂಕಟರಾಮಯ್ಯ (ಮಂಚಿಬಾಗಿಲು).—ಮಾನ್ಯ ಕಂದಾಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಾದ್ಯಂತ ಭೀಕರವಾದ ಕ್ಷಾಮ ಪರಿಸ್ಥಿತಿಯಿಂದಾಗಿ ಜಾನುವಾರುಗಳಿಗೆ ಮೇವಿಲ್ಲದೆ ಸತ್ತು ಬೀಳುತ್ತಿರುವ ಪರಿಸ್ಥಿತಿಯಲ್ಲಿ ಈ ಜಾನುವಾರು ಸಂಪತ್ತನ್ನು ರಕ್ಷಿಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ಹಾಗೂ ಅದಕ್ಕೆ ತಗುಲಿದ ವೆಚ್ಚವೆಷ್ಟು ?

ಆ) ಎಷ್ಟು ತಾಲ್ಲೂಕುಗಳಲ್ಲಿ ಹುಲ್ಲಿನ ಬ್ಯಾಂಕುಗಳನ್ನು ಸ್ಥಾಪಿಸಲಾಗಿದೆ ?

ಇ) ರಾಜ್ಯದಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು ಹಾಗೂ ಎಷ್ಟು ಗೋಶಾಲೆಗಳನ್ನು ಸ್ಥಾಪಿಸಲಾಗಿದೆ ಮತ್ತು ಗೋಶಾಲೆಗಳಲ್ಲಿರುವ ಗೋವುಗಳ ಸಂಖ್ಯೆ ಎಷ್ಟು ?

ಈ) ಗೋಸಂಪತ್ತನ್ನು ರಕ್ಷಿಸಲು ಯುದ್ಧೋತ್ತರಾದಿಯ ಕ್ರಮಗಳನ್ನು ತೆಗೆದುಕೊಳ್ಳುವ ಯೋಜನೆ ಸರಕಾರಕ್ಕಿದೆಯೆ ?

ಉ) ಹಾಗಿದ್ದಲ್ಲಿ, ಅದರ ವಿವರಗಳೆಷ್ಟು ?